ಇ) ಹಾವೇರಿ ನ್ಯಾಯಾಲಯದಲ್ಲಿನ ಬಾಕಿ ಇರುವ ಪ್ರಕರಣಗಳಲ್ಲಿ ಸವಣೂರು ತಾಲ್ಲೂಕಿಗೆ ಸಂಬಂಧಿಸಿದ ಪ್ರಕರಣಗಳ ಸಂಖ್ಯೆಯನ್ನು ಪರಿಶೀಲಿಸಿದ ನಂತರ ಸಧ್ಯಕ್ಕೆ ಸವಣೂರಿನಲ್ಲಿ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ನ್ಯಾಯಾಲಯ ಸ್ಥಾಪಿಸುವ ಅಗತ್ಯವಿಲ್ಲವೆಂಬುದಾಗಿ ಉಚ್ಚನ್ಯಾಯಾಲಯ ತೀರ್ಮಾನಿಸಿದೆ.

5749, (5822) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿರುವ ಕೇಂದ್ರ ಕಾರಾಗೃಹದಲ್ಲಿರುವ ರಾಜ್ಯ ಖೈದಿಗಳು ಹಾಗೂ ವಿಚಾರಣಾಧೀನ ಖೈದಿಗಳ ಸಂಖ್ಯೆ ಎಷ್ಟು ?

ಆ) ವಿಚಾರಣಾಧೀನ ಖೈದಿಗಳ ಪೈಕಿ 6 ತಿಂಗಳಿಗಿಂತ ಹೆಚ್ಚು ಕಾಲ ಕೋರ್ಟಿಗೆ ಹಾಜರುಪಡಿಸದೆ ಇರತಕ್ಕ ಖೈದಿಗಳ ಸಂಖ್ಯೆ ಎಷ್ಟು ?

ಇ) ವಿಚಾರಣಾಧೀನ ಖೈದಿಗಳನ್ನು ಕೋರ್ಟಿಗೆ ಕರೆದೊಯ್ಯಲು ಅಗತ್ಯ ಸಿಬ್ಬಂದಿ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಎಲ್ಲಾ ವಿಚಾರಣಾಧೀನ ಖೈದಿಗಳನ್ನು 6 ತಿಂಗಳೊಳಗೆ ಕೋರ್ಟಿಗೆ ಹಾಜರು ಪಡಿಸಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು:

ಶ್ರೀ ಧರ್ಮಸಿಂಗ್, ಮಾನ್ಯ ಮುಖ್ಯ ಮಂತ್ರಿಗಳು

ಅ) ದಿನಾಂಕ 30–06–2005 ರಲ್ಲಿದ್ದಂತೆ ಸಂಖ್ಯೆ :

ಸಜಾ ಬಂಧಿಗಳು	–	1349 ಪುರುಷ, 18 ಮಹಿಳೆಯರು
ವಿಚಾರಣಾ ಬಂಧಿಗಳು	–	2514 ಪುರುಷ, 87 ಮಹಿಳೆಯರು

ಆ) ವಿಚಾರಣಾಧೀನ ಖೈದಿಗಳ ಪೈಕಿ 6 ತಿಂಗಳಿಗಿಂತ ಹೆಚ್ಚು ಕಾಲ ಕೋರ್ಟಿಗೆ ಹಾಜರು ಪಡಿಸದೆ ಇರತಕ್ಕ ಖೈದಿಗಳ ಸಂಖ್ಯೆ 198

ಇ) ಹೌದು. ಈ ಬಗ್ಗೆ ಅಗತ್ಯ ಬೆಂಗಾವಲು ಸಿಬ್ಬಂದಿ ಪೂರೈಸಲು ಪೋಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು, ಬೆಂಗಳೂರು ಇವರನ್ನು ಕೋರಲಾಗಿದೆ.

ಈ) ಬಂದಿಗಳ ಪ್ರಕರಣಗಳನ್ನು ತ್ವರಿತ ವಿಲೇವಾರಿಗಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

1. ದೃಶ್ಯ ಮಾಧ್ಯಮ ಸಂವಾದ (ವಿಡಿಯೋ ಕಾನ್ಫರೆನ್ಸಿಂಗ್) ಮೂಲಕ ವಿವಿಧ ಗೌ : ನ್ಯಾಯಾಲಯಗಳ ಮುಂದೆ ವಿಚಾರಣ ಬಂಧಿಗಳ ಹಾಜರಾತಿ ಮಾಡುವುದು.
2. ಕಾರಾಗೃಹಗಳ ಆವರಣಗಳಲ್ಲಿಯೇ ಗೌ : ನ್ಯಾಯಾಲಯಗಳು ಲೋಕ ಅದಾಲತ್ ನಡೆಸಿ ಬಾಕಿ ಇದ್ದ ಪ್ರಕರಣಗಳ ವಿಲೇವಾರಿ ಮಾಡುವುದು.
3. ಕಾರಾಗೃಹಗಳ ಆವರಣದಲ್ಲಿಯೇ 2 ವಿಶೇಷ ಸತ್ರ ನ್ಯಾಯಾಲಯಗಳ ಸ್ಥಾಪನೆ ಮಾಡಿದೆ.

5750, (6600)ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಂಡ್ಯ ನಗರದಲ್ಲಿ ಗೂಡ್ಸ್ ಟೆಂಪೋಗಳಿಗೆ ಶಾಶ್ವತ ನಿಲ್ದಾಣ

ಗೊತ್ತುಪಡಿಸದಿರುವುದರಿಂದ ಸಿಲ್ವರ್ ಜ್ಯೂಬಿಲಿ ಪಾರ್ಕ್ ಹಾಗೂ ರೈಲ್ವೆ ನಿಲ್ದಾಣ ರಸ್ತೆಯಲ್ಲಿ ನಿಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಟೆಂಪೋಗಳು ಎಷ್ಟು ವರ್ಷಗಳಿಂದ ಸದರಿ ಜಾಗದಲ್ಲಿ ನಿಲ್ಲಿಸುತ್ತಿವೆ;

ಇ) ಸದರಿ ವಾಹನಗಳ ನಿಲುಗಡೆಯಿಂದ ಪಾರ್ಕ್ ಹಾಗೂ ರೈಲ್ವೆ ನಿಲ್ದಾಣ ರಸ್ತೆಯ ಪರಿಸರ ಮಾಲಿನ್ಯದಿಂದ ಕೂಡಿ ಸಾರ್ವಜನಿಕರಿಗೆ ಹಾಗೂ ಅಲ್ಲಿ ಹಾದು ಹೋಗುವ ಪ್ರಯಾಣಿಕರಿಗೆ ಅನಾನುಕೂಲ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸದರಿ ತೊಂದರೆ ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು;

ಉ) ಸದರಿ ಗೂಡ್ಸ್ ಟೆಂಪೋಗಳಿಗೆ ಶಾಶ್ವತ ನಿಲ್ದಾಣವನ್ನು ನೀಡಲು ಸರ್ಕಾರದ ಮುಂದೆ ಎಷ್ಟು ವರ್ಷಗಳಿಂದ ಪ್ರಸ್ತಾವನೆ ಬಾಕಿ ಇದೆ; ಸದರಿ ಪ್ರಸ್ತಾವನೆಯನ್ನು ಸಾರ್ವಜನಿಕ ಹಿತದೃಷ್ಟಿ ಹಾಗೂ ನಗರದ ಸೌಂದರ್ಯ ಕಾಪಾಡುವ ದೃಷ್ಟಿಯಿಂದ ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ ?

ಶ್ರೀ ಧರ್ಮಸಿಂಗ್, ಮಾನ್ಯ ಮುಖ್ಯ ಮಂತ್ರಿಗಳು

ಅ) ಹೌದು.

ಆ) ಸುಮಾರು ಎರಡು ವರ್ಷಗಳಿಂದ.

ಇ) ಹೌದು.

ಈ) ನಗರಸಭೆಯು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೂಕ್ತ ಜಾಗವನ್ನು ಒದಗಿಸುವಂತೆ ಕೋರಿದೆ.

ಉ) ಸುಮಾರು ಎರಡು ವರ್ಷಗಳಿಂದ. ನಗರಾಭಿವೃದ್ಧಿ ಪ್ರಾಧಿಕಾರವು ಸೂಕ್ತವಾದ ಜಾಗವನ್ನು ಗುರುತಿಸಿ ನಗರಸಭೆಯ ವಶಕ್ಕೆ ನೀಡದೆ ಇರುವುದರಿಂದ ವಿಳಂಬವಾಗಿದೆ. ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಈ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗುವುದು.

5751. (6438) ಶ್ರೀ ಶ್ರೀರಾಮರೆಡ್ಡಿ ಜಿ. ವಿ. (ಬಾಗೇಪಲ್ಲಿ) :– ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಜಲಸಂವರ್ಧನಾ ಯೋಜನೆಯನ್ನು ಎಂದಿನಿಂದ ಕೈಗೊಳ್ಳಲಾಗಿದೆ;

ಆ) ಇದುವರೆಗೆ ಈ ಯೋಜನೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು);

ಇ) ಇದುವರೆಗೆ ಈ ಯೋಜನೆಯಡಿ ಎಷ್ಟು ಕೆರೆಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ ? (ಜಿಲ್ಲಾವಾರು ವಿವರ ಒದಗಿಸುವುದು);

ಶ್ರೀ ಮಲ್ಲಿಕಾರ್ಜುನ ಖರ್ಗೆ, ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು.

ಅ) ದಿನಾಂಕ : 08–07–2002

ಆ) ರೂ. 103.17 ಕೋಟಿಗಳು ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ: